ಎಷ್ಟು ಮುಖ್ಯ ಅಂತ ಶೆಟ್ಟರು ಮತ್ತು ಆನಂದಣ್ಣನಿಗೆ ಮನದಟ್ಟು ಮಾಡಲು ಮುಂದಾದರು. ಇದೊಂದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ವೈರಸ್ ಕಾಯಿಲೆ. ಜನ ಒಬ್ಬರಿಂದ ಇನ್ನೊಬ್ಬರು ಕನಿಷ್ಠ 6 ಅಡಿ ದೂರದಲ್ಲಿರಬೇಕು. ಈಗ ಸೆಲ್ ಫೋನ್ ಇರುವುದರಿಂದ ಜನ ಬೇಕಾದರೆ ಒಬ್ಬರಿಗೊಬ್ಬರು ಸೆಲ್ ಫೋನ್‌ನಲ್ಲಿ ಮಾತಾಡಬಹುದು ಎಂಬ ಸಲಹೆಯನ್ನೂ ನೀಡಿದರು.

ಕೊನೆಗೂ ಆನಂದಣ್ಣ ಮತ್ತು ಶೆಟ್ಟರು ಇವರ ಮಾತು ಕೇಳಿ ಇಡೀ ಊರಿಗೆ ಸಂದೇಶ ಕಳುಹಿಸಲು ಮುಂದಾದರು.

ಪ್ರಭಾಕರ ತನ್ನ ಹಿಂಬಾಲಕರಾದ ಕೆಲವು ಹುಡುಗರನ್ನು ಕರೆದು ಅವರಿಗೆ ವಿಷಯ ವಿವರಿಸಿ, ಅವರ ಜೊತೆ ಊರಿನ ಕಡೆ ಹೊರಟ. ಇದೊಂದು ಮಹಾಮಾರಿ ಅಂತಲೂ ಇದನ್ನು ತಪ್ಪಿಸಲು ಒಬ್ಬರನ್ನೊಬ್ಬರು ಭೇಟಿಯಾಗಬಾರದೆಂದೂ ಬೇಕಾದರೆ ಸೆಲ್ ಫೋನ್‌ನಲ್ಲಿ ಮಾತನಾಡಬೇಕೆಂದೂ ವಿವರಿಸಿದ.

ಸೀತಾಪುರದ ಜನ ಸಿಟ್ಟಿಗೆದ್ದರು. 'ಅಲ್ಲಾ, ಸಣ್ಣ ಶೆಟ್ರೇ, ನೀವು ಈ ಮಾತು ಆ ಸಂಜಯ ಕಾರಂತರು ಮತ್ತು ನವ್ಯ ಹೇಳ್ತಾರೆ ಅಂತ ಹೇಳ್ತಿದ್ದೀರಿ... ಇದೆಲ್ಲಾ ಏನೂ ಇಲ್ಲ. ಇದು ಸಾಮಾನ್ಯ ಜ್ವರ. ಪಂಜುರ್ಲಿಯನ್ನು ಕೆಣಕಿದ್ದರಿಂದ ಬಾಬಣ್ಣ ಸತ್ತ. ನಮಗೇನೂ ಆಗುವುದಿಲ್ಲ' ಅಂದರು.

ಕೆಲವರು 'ಇದೆಲ್ಲಾ ಈ ಪೇಟೆಯ ಜನರ ಪಿತೂರಿ. ನಾವು ಒಬ್ಬರಿಗೊಬ್ಬರು ಮಾತನಾಡಬೇಕಿದ್ದಲ್ಲಿ ಸೆಲ್ ಫೋನ್‌ನಲ್ಲಿ ಮಾತನಾಡಬೇಕಂತೆ. ಹಾಗೆಲ್ಲಾ ಆಗುವುದುಂಟೆ? ನಮ್ಮೂರಿನಲ್ಲಿ ನಾಲ್ಕು ಜನರಿಗೆ ಸೆಲ್ ಫೋನ್ ಕೊಟ್ಟು ಉಳಿದವರು ಸೆಲ್ ಫೋನ್ ಖರೀದಿಸುವ ಹಾಗೆ ಮಾಡುವ ಸಂಚು ಇದು' ಅಂದರು ಕೆಲವರು.

ಕೆಲವರು ಸಂಜಯ್, ಸಂದೇಶ್ ಮತ್ತು ನವ್ಯಳನ್ನು ಭೇಟಿಯಾಗಿ ಈ ಬಗ್ಗೆ ಚರ್ಚೆ ಮಾಡುವುದಾಗಿ ಹೇಳಿದರು. ಪ್ರಭಾಕರ ಜನರಿಗೆ ತಿಳಿಹೇಳಲು ಹರಸಾಹಸ ಮಾಡಿದ. ಅಷ್ಟರಲ್ಲಿ ಸಂಜಯನಿಗೆ ಶಾಸ್ತ್ರಿಗಳ ನೆನಪು ಬಂತು.

ಕೂಡಲೇ ವೇಗವಾಗಿ ಶಾಸ್ತ್ರಿಗಳ ಮನೆಯ ಕಡೆಗೆ ನಡೆದ. ಮನೆ ಸಮೀಪಕ್ಕೆ ಬರುವಾಗ ಮನೆಯ ಸುತ್ತ ಹತ್ತಾರು ಜನರು ಔಷಧಿಗೆ ಕಾಯುವುದು ಕಂಡಿತು. ಮನೆಗೆ ಬಂದವನೇ ಸಂಜಯ್ ಎಲ್ಲರಿಗೂ ಕೈಮುಗಿದು, ಎಲ್ಲರೂ ದೂರ ದೂರ ಕುಳಿತುಕೊಳ್ಳಲು ವಿನಂತಿಸಿದ. ಶಾಸ್ತ್ರಿಗಳ ಸಮೀಪ ಹೋಗಿ ಒಂದು ನಿಮಿಷ ಮನೆಯ ಒಳಗೆ ಬರಲು ಅವರನ್ನು ಆಹ್ವಾನಿಸಿದ.

'ಯಾಕೆ ಸಂಜಯ್?' ಅನ್ನುತ್ತಾ ತಮ್ಮ ಶಾಲನ್ನು ಹೆಗಲ ಮೇಲೆ ಏರಿಸುತ್ತಾ ಶಾಸ್ತ್ರಿಗಳು ಮನೆಯ ಒಳಗೆ ಬಂದರು.

ಸಂಜಯ್ ಹೇಳಿದ – 'ಶಾಸ್ತ್ರಿಗಳೇ, ನೀವು ಇದು ಈ ಊರಿನ ಜ್ವರ ಅಲ್ಲ ಅಂತ ಆಗ ಹೇಳಿದ್ದು ಸರಿ. ಇದು ಜಗತ್ತಿಗೇ ಹೊಸದು. ಇದರ ಹೆಸರು ಕೊರೊನಾ ಅಂತ. ಇದು ಬಹಳ ದೊಡ್ಡ ಮಹಾಮಾರಿ. ಇದನ್ನು ತಡೆಯಲಿಕ್ಕೆ ಜನ ಮಾಸ್ಕ್ ಹಾಕಬೇಕು. ಹಾಗೆಯೇ ಒಬ್ಬರಿಂದ ಇನ್ನೊಬ್ಬರು ಅಂತರದಲ್ಲಿ ಇರಬೇಕು. ಇದಕ್ಕೆ ಜಗತ್ತಿನಲ್ಲಿ ಔಷಧವೇ ಇಲ್ಲ' ಎಂದ.

ಶಾಸ್ತ್ರಿಗಳು ಸಂಜಯನ ಮುಖ ನೋಡಿದರು. 'ನೋಡು ಸಂಜಯ್, ಔಷಧ ಇಲ್ಲದ ಕಾಯಿಲೆ ಈ ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲ. ದೇವರು ಕಾಯಿಲೆ ಸೃಷ್ಟಿಸುವಾಗ ಔಷಧವನ್ನೂ ಸೃಷ್ಟಿಸುತ್ತಾನೆ' ಅಂದರು.

ಸಂಜಯ್ 'ಶಾಸ್ತ್ರಿಗಳೇ, ಇರಬಹುದು. ನಾನು ಇಲ್ಲ ಅಂತ ಹೇಳ್ತಿಲ್ಲ. ಈಗ ಈ ಕಾಯಿಲೆಗೆ ಔಷಧ ಕಂಡು ಹುಡುಕಲಾಗಿಲ್ಲ. ನನಗೆ ನೀವು ಜನರನ್ನು ಸ್ಪರ್ಶಿಸಿ ಔಷಧ ನೀಡುವುದನ್ನು ನೋಡಿ ಹೆದರಿಕೆಯಾಗ್ತಿದೆ. ನೀವು ದೂರದಲ್ಲೇ ನಿಂತು ಔಷಧ ನೀಡಿ. ಯಾರನ್ನೂ ಸ್ಪರ್ಶಿಸಬೇಡಿ' ಎಂದು ಕೈಮುಗಿದ.

ಶಾಸ್ತ್ರಿಗಳ ಮುಖದಲ್ಲಿ ಮುಗುಳ್ನಗೆ ಹುಟ್ಟಿತು. 'ಹುಚ್ಚು ಹುಡುಗ, ನನಗೇನಾದರೂ ಆಗ್ತದೆ ಅಂತ ನಿನಗೆ ಭಯಾನಾ? ನೋಡು, ನಾನು ವೈದ್ಯ. ನನ್ನ ವೃತ್ತಿ ಜನರಿಗೆ ಮದ್ದು ಕೊಡುವುದು. ಅದು ಗುಣ ಆಗುವುದು ಬಿಡುವುದು ನನ್ನ ಕೈಯಲ್ಲಿ ಇಲ್ಲ. ಆದರೆ ಜನರನ್ನು ಕೂಲಂಕಷ ಪರೀಕ್ಷಿಸಿ ಮದ್ದು ಕೊಡುವುದು ನನ್ನ ಧರ್ಮ. ಅದಕ್ಕಾಗಿ ನಾನು ಜನರನ್ನು ಮುಟ್ಟಬೇಕಾಗಿ ಬರಬಹುದು. ಆದರೆ ಅದಕ್ಕೆ ಹೆದರಿ ನನಗೆ ಕೂತುಕೊಳ್ಳಿಕ್ಕೆ ಆಗ್ತದಾ? ನಾಡಿ ಪರೀಕ್ಷೆ ಮಾಡದೆ, ಜನರನ್ನು ಹತ್ತಿರದಿಂದ ನೋಡದೆ ಹೇಗೆ ಮದ್ದು ಕೊಡ್ಲಿ ಹೇಳು? ಅಷ್ಟಕ್ಕೂ ನನಗೆ ಕಾಯಿಲೆ ಬರ್ತದೆ ಅಂತ ವಿಧಿ ಬರ್ದಿದ್ರೆ ಅದನ್ನು ಯಾರಿಂದಲೂ ಬದಲಾಯಿಸಲಿಕ್ಕೆ ಆಗುದಿಲ್ಲ. ನಾನು ಮದ್ದು ಕೊಡ್ಲಿ, ಕೊಡದೆ ಇರ್ಲಿ, ನನಗೆ ಬರುವುದಿದ್ರೆ ಬಂದೇ ಬರ್ತದೆ' ಅಂದರು.

ಸಂಜಯನಿಗೆ ಪ್ರತಿಕ್ರಿಯಿಸಲು ತಿಳಿಯಲಿಲ್ಲ. ಆದರೂ ಆತ ಮತ್ತೊಮ್ಮೆ ವಿನಂತಿಸಲು ಮುಂದಾದ. 'ದಯವಿಟ್ಟು ಜನರನ್ನು ಮುಟ್ಟಿ ಔಷಧ ಕೊಡ್ಬೇಡಿ' ಎಂದು ಕೈಮುಗಿದ.

ಶಾಸ್ತ್ರಿಗಳು 'ನೀನು ಹೆದರ್ಬೇಡ' ಎನ್ನುತ್ತಾ ಅವನ ಮಾತನ್ನು ನಿರ್ಲಕ್ಷಿಸಿ ಔಷಧ ನೀಡಲು ಹೊರ ನಡೆದರು.

ಸಂಜಯನ ಕಣ್ಣಂಚಿನಲ್ಲಿ ನೀರು ಬಂತು. ಆ ದಿನ ಮನೆಯ ದನ ಗೌರಿ ಮೇಲಿಂದ ಮೇಲೆ 'ಅಂಬಾ' ಎಂದರೂ ಶಾಸ್ತ್ರಿಗಳು ಔಷಧ ಕೊಡುವುದು ಬಿಟ್ಟು ಬರಲಿಲ್ಲ. ನಡುವೆ 'ಸೀತಾ, ಗೌರಿಗೆ ಹಸಿವಾಗ್ತಿದೆ ನೋಡು, ಅವಳಿಗೆ ಊಟ ಹಾಕಿ ನೀವೂ ಊಟ ಮಾಡಿ. ನಾನು ಔಷಧ ಕೊಟ್ಟು ಬರ್ತೇನೆ' ಎಂದರು.

ಸೀತಮ್ಮ ಶಾಸ್ತ್ರಿಗಳ ಮಾತನ್ನು ಪಾಲಿಸಿದರು. 'ನಾವೂ ಮತ್ತೆ ಊಟ ಮಾಡ್ತೇವೆ' ಎಂದ ಆಶಾ ಮತ್ತು ಸಂಜಯನನ್ನು ಒತ್ತಾಯಿಸಿ ಬಡಿಸಿದರು. ಗೌರಿಗೂ ಅನ್ನ ಇಟ್ಟು ಬಂದರು. ಶಾಸ್ತ್ರಿಗಳು ಒಳಗೆ ಬರುವುದನ್ನು ಕಾಯುತ್ತಾ ಕುಳಿತರು.

ಸಂಜಯ್ ಒಲ್ಲದ ಮನಸ್ಸಿನಿಂದ ಊಟ ಮುಗಿಸಿ ಎದ್ದ. ಮುಂದೇನು ಮಾಡುವುದು ಎಂದು ಆಲೋಚನೆ ಮಾಡಲು ಸಂದೇಶ್ ಮತ್ತು ನವ್ಯಳ ಭೇಟಿಗೆ ಹೊರಟ.

ಶೆಟ್ಟರ ಮನೆ ತಲುಪಿದಾಗ ಅಲ್ಲಿ ಪ್ರಭಾಕರ ನಿಂತಿದ್ದ. ತನ್ನ ಸೆಲ್ ಫೋನ್‌ನಲ್ಲಿ ಗಂಭೀರವಾಗಿ ಏನನ್ನೋ ಮಾಡುತ್ತಿದ್ದ. ಸಂಜಯ್ ಹತ್ತಿರ ಹೋಗಿ ನೋಡಿದಾಗ 'ಸೀತಾಪುರದಲ್ಲಿ ಕೊರೊನಾ' ಎಂಬ ಮೆಸೇಜ್ ಪ್ರಭಾಕರ ಎಲ್ಲಾ ಸೋಶಿಯಲ್ ಮೀಡಿಯಾ ಪ್ಲಾಟ್‌ಫಾರಂಗಳಲ್ಲಿ ಹಾಕುತ್ತಿದ್ದ.

'ಅಯ್ಯೋ, ಇದೇನು ಮಾಡಿದೆ?' ಸಂಜಯ್ ಕೇಳಿದ.

'ನವ್ಯ ಈ ತರಹ ಮೆಸೇಜ್ ಮಾಡಿ ಇಡೀ ಜಗತ್ತಿನಿಂದ ಸಹಾಯ ಕೇಳಲು ಹೇಳಿದಳು' ಅಂದ ಪ್ರಭಾಕರ.

'ಸಂದೇಶ್ ಮತ್ತು ನವ್ಯ ಎಲ್ಲಿ?' ಕೇಳಿದ ಸಂಜಯ್.

'ಊರವರು ಇಲ್ಲಿ ಬಂದು ಸಂದೇಶ್ ಮತ್ತು ನವ್ಯಳನ್ನು ತರಾಟೆಗೆ ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದರು. ನಾನು ಅವರಿಗೆ ಊರು ಬಿಟ್ಟು ಹಿಂದೆ ಹೊರಟು ಹೋಗಲು ಸಲಹೆ ಕೊಟ್ಟೆ' ಎಂದು ಪ್ರಭಾಕರ ಹೇಳಿದ.

'ಸೀತಾಪುರದಲ್ಲಿ ಕೊರೊನಾ' ಎಂಬ ಮೆಸೇಜ್ ಎಲ್ಲಾ ಸೋಶಿಯಲ್ ಮೀಡಿಯಾದಲ್ಲಿ ಮಿಂಚುತ್ತಿತ್ತು. ಹಾಗೇ ಸಂದೇಶ್ ಹಾಗೂ ನವ್ಯ ತಾವು ಸೀತಾಪುರ ಬಿಟ್ಟು ಹೊರಟಿರುವುದಾಗಿಯೂ ಅದರಲ್ಲಿ ಬರೆದಿದ್ದರು.

ಸಂಜಯ್ ಶೆಟ್ಟರ ಅಂಗಳದಲ್ಲಿ ಕುಸಿದು ಕುಳಿತ. ಅವನು ಒಬ್ಬಂಟಿಯಾಗಿದ್ದ. ಅವನಿಗೆ ಯಾವ ದಿಕ್ಕೂ ತೋಚದಾಯಿತು. ಇದು ಕೊರೊನಾ ಮಹಾಮಾರಿ ಹೌದೋ ಅಲ್ಲವೋ ಎನ್ನುವುದು ಅವನಿಗೆ ಗೊತ್ತಿರಲಿಲ್ಲ. ಜನ ಹೀಗೆ ಕಾಯಿಲೆ ಬೀಳುವುದನ್ನು ನೋಡಿದರೆ ಇದು ಕೊರೊನಾವೇ ಇರಬೇಕೆಂದು ಕಂಡಿತು. ಪ್ರಭಾಕರ ಈಗಾಗಲೇ ಸೀತಾಪುರದಲ್ಲಿ ಕೊರೊನಾ ಹರಡುತ್ತಿರುವುದಾಗಿ ಘೋಷಿಸಿದ್ದ. ವಿಶ್ವದಾದ್ಯಂತ ಜನರ ಸಹಾಯ ಕೇಳಿದ್ದ. ಸಂಜಯನಿಗೆ ಸಹಾಯ ಕೇಳುವುದು ಸರಿ ಅನ್ನಿಸಿತು. 'ಸೀತಾಪುರವನ್ನು ಕೊರೊನಾದಿಂದ ಉಳಿಸಿ' ಎಂಬ ಮೆಸೇಜ್ ಹಾಕಿದ.

ಮರುದಿನ ಬೆಳಗ್ಗೆ ಸಂಜಯ್ ಬೇಗನೇ ಎದ್ದು ಬೆಳಗಿನ ನಡಿಗೆಗೆ ಸಿದ್ಧನಾದ. ಶಾಸ್ತ್ರಿಗಳು ಜೊತೆ ಸೇರುತ್ತಾರೆಂದು ಕಾದು ಕುಳಿತ. ಆದರೆ ಶಾಸ್ತ್ರಿಗಳು ರೂಮಿನಿಂದ ಹೊರಬರುವ ಲಕ್ಷಣ ಕಾಣಲಿಲ್ಲ. ಕೊನೆಗೆ ಸಂಜಯ್ ಸೀತಮ್ಮನ ಹತ್ತಿರ ಶಾಸ್ತ್ರಿಗಳ ಬಗ್ಗೆ ವಿಚಾರಿಸಿದ.

ಸೀತಮ್ಮ ಶಾಸ್ತ್ರಿಗಳಿಗೆ ನಿನ್ನೆ ರಾತ್ರಿಯಿಂದ ಜೋರಾಗಿ ಜ್ವರ ಬಂದಿರುವುದಾಗಿ ತಿಳಿಸಿದರು.

ಸಂಜಯನಿಗೆ ನಿಂತ ನೆಲ ಕುಸಿದಂತಾಯಿತು. ಒಂದು ಕ್ಷಣದಲ್ಲೇ ಚೇತರಿಸಿಕೊಂಡ. ಲ್ಯಾಪ್‌ಟಾಪ್ ತೆರೆದ. ಶಾಸ್ತ್ರಿಗಳಿಗೆ ಕೊರೊನಾ ಬಂದಿರುವುದಾಗಿ ವರದಿ ಮಾಡಿದ. ಶಾಸ್ತ್ರಿಗಳ ಚಿಕಿತ್ಸೆಗಾಗಿ ಯಾವ ಔಷಧಗಳನ್ನು ಬಳಸಬಹುದು ಎಂದು ತಜ್ಞರು ನಿರ್ದೇಶನ ನೀಡಬೇಕೆಂದು ಮನವಿ ಮಾಡಿದ.

ಸೋಶಿಯಲ್ ಮೀಡಿಯಾದ ಈ ಪ್ರಸರಣಕ್ಕೆ ಜಗತ್ತಿನಾದ್ಯಂತ ಜನರು ಸ್ಪಂದಿಸಿದರು. ಕೆಲವರು ಅಲೋಪಥಿಕ್ ಔಷಧಗಳನ್ನು ಸೂಚಿಸಿದರು. ಕೆಲವರು ಹೋಮಿಯೋಪತಿಯ ಮೊರೆ ಹೋಗಿ ಎಂಬ ಸಲಹೆ ನೀಡಿದರು.